# ತೂಕದ ನೆಲೆ

ಸಂಪಾದಕರು

ಡಾ. ಶಿವಲಿಂಗಪ್ಪ. ಆಯ್. ಭಂಡಾರಿ

ಡಾ. ತಿಪ್ಪೇಸ್ವಾಮಿ. ಡಿ. ಎಸ್



# ತೂಕದ ನೆಲೆ

(ವಿಮರ್ಶಾ ಲೇಖನಗಳು)


ಡಾ. ಶಿವಲಿಂಗಪ್ಪ ಆಯ್. ಭಂಡಾರಿ

ಎಂ.ಎ.ಪಿಹೆಚ್.ಡಿ

ಡಾ. ತಿಪ್ಪೇಸ್ವಾಮಿ ಡಿ. ಎಸ್.

ಎಂ.ಎ.ಪಿಹೆಚ್.ಡಿ



ಪ್ರಕಾಶಕರು

**ಎಸ್.ಎಲ್.ಎನ್. ಪಬ್ಲಿಕೇಷನ್**

ನಂ. 3437, 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಶಾಸ್ತ್ರಿನಗರ

ಬನಶಂಕರಿ 2ನೇ ಹಂತ, ಬೆಂಗಳೂರು-29

ಮೊ : 9972129376

**umeshnagamangala@gmail.com**

**ತೂಕದ ನೆಲೆ** : ವಿಮರ್ಶಾ ಲೇಖನಗಳು

ಲೇಖಕರು : **ಡಾ. ತಿಪ್ಪೇಸ್ವಾಮಿ ಡಿ. ಎಸ್.**
ಹುನಗುಂದ, ಬಾಗಲಕೋಟೆ
ಡಾ. ಶಿವಲಿಂಗಪ್ಪ ಆಯ್. ಭಂಡಾರಿ
ಸಿಂಧಗಿ, ವಿಜಯಪುರ

**ಪ್ರಕಾಶಕರು** : **ಎಸ್.ಎಲ್.ಎನ್. ಪಬ್ಲಿಕೇಷನ್**
ನಂ. 3437, 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ,
ಶಾಸ್ತ್ರೀನಗರ, ಬನಶಂಕರಿ 2ನೇ ಹಂತ,
ಬೆಂಗಳೂರು-29. ಮೊ : 9972129376

**ISBN** : **978-81-948128-7-6**

ಪ್ರಥಮ ಮುದ್ರಣ : 2020

ಅಳತೆ : 1/8 ಡೆಮ್ಮಿ
ಕಾಗದದ ಬಳಕೆ : 70 ಜಿ.ಎಸ್.ಎಂ. ಮ್ಯಾಪ್ಲಿಥೋ

ಪುಟಗಳು : xii+296=308

ಹಕ್ಕುಗಳು : ಲೇಖಕರದ್ದು

ಪ್ರತಿಗಳು : 1000

ಬೆಲೆ : **ರೂ. 300-00**

ಮುಖಪುಟ ವಿನ್ಯಾಸ : ಕೆ.ಕೆ. ಮಕಾಳಿ. ಹಂಪೆ

ಅಕ್ಷರ ಜೋಡಣೆ : ಸಹನಾ ಗ್ರಾಫಿಕ್ಸ್, ಬೆಂಗಳೂರು. 9342196255

ಮುದ್ರಣ : ಓಂ ಶ್ರೀ ಪ್ರಿಂಟರ್ಸ್, ಕಸ್ತೂರಿ ಬಾ ನಗರ
ಬೆಂಗಳೂರು

Title- Counter Protagonist of Pamapa

- Dr. M. B. Onti

# ಪಂಪನ ಪ್ರತಿನಾಯಕ ಕರ್ಣ

– ಡಾ. ಮುರ್ತುಜಾ ಬ. ಒಂ

"ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ" ಎಂದ "ಪುಣ್ಯಾಶ್ರವ" ಚಂಪೂಕಾವ್ಯದ ಕರ್ತೃ ನಾಗರಾಜ(1331) ಹೇಳಿದ್ದಾನೆ. ಆತ ಈ ಹೇಳಿಕೆ ಸಾರ್ವತ್ರಿಕ ಸತ್ಯವಾದುದು. "ನಾಡೋಜ ಪಂಪ" ಗ್ರಂಥ ರಚನಾಕಾರರು, ವಿದ್ವಾಂಸರು ಆದ ಡಾ. ಮುಳಿಯ ತಿಮ್ಮಪ್ಪಯ್ಯನವರು ಸ "ಪಸರಿಪ ಕನ್ನಡಕ್ಕೆ ಪಂಪನೊರ್ವನೆ ನಾಡೋಜ" ಎಂದಿರುವುದನ್ನು ಇ ನೆನೆಯಬಹುದು. ಅಲ್ಲದೆ ಇನ್ನೂ ಅನೇಕ ಕವಿಗಳು, ವಿದ್ವಾಂಸರು ಆದಿಕ ಪಂಪನನ್ನು ಹಲವು ರೀತಿಯಿಂದ ಸ್ತುತಿಸಿದ್ದನ್ನು ಗಮನಿಸಿದರೆ ಅವನ ನಿಜವಾಗಿಯೂ ಕನ್ನಡ ಕಾವ್ಯ ಪ್ರಪಂಚಕ್ಕೆ ಯಾವಾಗಲೂ ಸರ್ವಶ್ರೇಷ್ಠ ಕವಿಯೇ

ರತ್ನತ್ರಯರಲ್ಲಿ ಮೊದಲಿಗನು, ಕನ್ನಡದ ಮೊದಲ ಕವಿ ಎನ್ನುವ ಅಭಿದಾನವುಳ್ಳ 'ಕವಿತಾ ಗುಣಾರ್ಣವ 'ಖ್ಯಾತಿಯ ಪಂಪ ಮಹಾಕವಿಯು ಹತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಬಾಳಿ ಬದುಕಿದವನು. ಚಂಪೂಕಾವ್ಯ ಪರಂಪರೆಯ ನಿರ್ಮಾತೃವಾದ ಪಂಪನು ಕನ್ನಡದಲ್ಲಿ ವಿನೂತನವಾದುದನ್ನು ಸೃಷ್ಟಿಸಿ ನಂತರದ ಕವಿಗಳಿಗೆ ಅನುಕರಣೀಯನಾಗಿದ್ದಾನೆ. "ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ" ಎಂದು ಪ್ರತಿಜ್ಞೆ ಮಾಡಿ "ಆದಿ ಪುರಾಣ"

ಎನ್ನುವ ಧಾರ್ಮಿಕ(ಜಿನಾಗಮಮಂ) ಕಾವ್ಯವನ್ನು "ವಿಕ್ರಮಾರ್ಜುನ ವಿಜಯಂ" ಎಂಬ ಲೌಕಿಕ ಕಾವ್ಯವನ್ನು ರಚಿಸುವ ಮೂಲಕ ತನ್ನ ತರುವಾಯದ ಕವಿಗಳು ತನ್ನಂತೆ ಕಾವ್ಯ ರಚಿಸಲಿ ಎನ್ನುವ ಮಾರ್ಗವೊಂದನ್ನು ಹಾಕಿಕೊಟ್ಟವನು. ದೇಸಿ ಹಾಗೂ ಮಾರ್ಗಗಳನ್ನು ಸಮನ್ವಯ ಮಾಡಿದ ಹಿರಿಮೆ ಆತನದು. ಅಂತೆಯೇ "ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು" ಎಂದಿದ್ದಾನೆ.

ರಸಿಕನೂ ಸಂಸಾರ ಸಾರೋದಯನೂ ಆದ ಪಂಪನು ತಾನು ರಚಿಸಿದ ಎರಡೂ ಮಹಾಕಾವ್ಯಗಳನ್ನು ಕುರಿತು "ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ ಸಮಸ್ತ ಭೂ ತಳಕೆ ಸಮಸ್ತ ಭಾರತಮುಮಾದಿ ಪುರಾಣಮುಮೆಂದು ಮೆಯ್ಯುಸಂಗೊಳುತಿರೆ ಪೂಣ್ದು ಪೂಣ್ದತೆಟದೊಂದಮಿದಿಂಗಳೊಳೊಂದುಮೂಟಿ ತಿಂಗಳೊಳೆ ಸಮಾಪ್ತಿಯಾದುದೆನೆ ಬಣ್ಣಿಸಿದಂ ಕವಿತಾಗುಣಾರ್ಣವಂ" ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ.

"ಆದಿಪುರಾಣ"ವನ್ನು ಮೂರು ತಿಂಗಳಲ್ಲಿ, "ವಿಕ್ರಮಾರ್ಜುನ ವಿಜಯಂ" ವನ್ನು ಗ್ರಂಥವನ್ನು ಆರು ತಿಂಗಳಲ್ಲಿ ಬರೆದೆನೆಂದು ಹೇಳಿದ್ದಾನೆ. ಇದು ಅವನ ಅದ್ಭುತ ಪ್ರತಿಭೆಯ ಪ್ರತೀಕವಲ್ಲದೆ ಇನ್ನೇನು?

ಮಹಾಕವಿ ಪಂಪನಿಗೆ ಹೆಚ್ಚು ಕೀರ್ತಿ, ಹೆಸರನ್ನು ತಂದುಕೊಟ್ಟ ಕೃತಿಯೆಂದರೆ ಪಂಪಭಾರತ. ಪಂಪ ಬರೆದ ಭಾರತವಾದ ಕಾರಣಕ್ಕೆ ಅದನ್ನು ಪಂಪಭಾರತ ಎನ್ನುತ್ತಾರೆ. ಆದರೆ ಆ ಗ್ರಂಥದ ಮೂಲ ಹೆಸರು "ವಿಕ್ರಮಾರ್ಜುನ ವಿಜಯಂ". ತನ್ನ ಆಶ್ರಯದಾತನಾದ ಚಾಲುಕ್ಯರ ಎರಡನೆಯ ಅರಿಕೇಸರಿಯನ್ನು ಮಹಾಭಾರತದ ಮಧ್ಯಮ ಪಾಂಡವನಾದ ಅರ್ಜುನನೊಂದಿಗೆ ಹೋಲಿಸಿ ರಚಿಸಿದ ಕಾವ್ಯವಿದು. ಇಲ್ಲಿ ಅರ್ಜುನ ಬೇರೆಯಲ್ಲ, ಅರಿಕೇಸರಿ ಬೇರೆಯಲ್ಲ. ಅರ್ಜುನನೆಂದರೆ ಅರಿಕೇಸರಿ, ಅರಿಕೇಸರಿ ಎಂದರೆ ಅರ್ಜುನ ಎನ್ನುವಂತೆ ಇಬ್ಬರನ್ನು ಪರಸ್ಪರ ಸಮೀಕರಿಸಿರುವನು. ಇದು ಅರ್ಜುನನ(ಅರಿಕೇಸರಿಯ) ಪರಾಕ್ರಮದ ವಿಜಯಗಳನ್ನು ಹೇಳುವ ಕಾರಣಕ್ಕಾಗಿ 'ವಿಕ್ರಮಾರ್ಜುನ ವಿಜಯಂ' ಎಂದು ಬಹುವಿಚಿತ್ರಪೂರ್ಣವಾದ ಶೀರ್ಷಿಕೆಯನ್ನು ಕೊಟ್ಟಿದ್ದಾನೆ. ಪಂಪನೇ ಗ್ರಂಥದ ಕೆಲವೆಡೆ ಇದನ್ನು 'ಸಮಸ್ತ ಭಾರತಂ' ಎಂದೂ ಕರೆದಿದ್ದಾನೆ. ಉದಾಹರಣೆಗಾಗಿ ಮುಂದಿನ ಪದ್ಯವನ್ನು ಗಮನಿಸಬಹುದು.

**"ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾ ರತ
ಮನಪೂರ್ವಮಾಗೆ ಸಲೆ ಪೇಟ್ದ ಕವೀಶ್ವರರಿಲ್ಲ ವರ್ಣಕಂ
ಕತೆಯೊಳೊಡಂಬಡಂ ಪಡೆಯೆ ಪೇಟ್ದೊಡೆ ಪಂಪನೆ ಪೇಳ್ಗುಮೆಂದು ಪಂ
ಡಿತರೆ ತಗುಳ್ದು ಬಿಚ್ಚಟಿಸೆ ಪೇಟಲೊಡರ್ಚಿದೆನೀ ಪ್ರಬಂಧಮಂ"**

ಆದಿಕವಿಯ ಈ ಕಾವ್ಯಕ್ಕೆ ವ್ಯಾಸರ ಮಹಾಭಾರತವೇ ಮೂಲ ಪ್ರೇರಣ ಅವನ ಧಾರ್ಮಿಕ ಕಾವ್ಯವಾದ "ಆದಿಪುರಾಣ"ಕ್ಕೂ ಜಿನಸೇನಾಚಾರ್ಯ "ಪೂರ್ವ ಪುರಾಣ" ಮೂಲ. ಪಂಪನಿಗೆ ಅದನ್ನು ಬರೆಯುವಾಗ ಅಷ್ಟು ಸ್ವಾತಂತ್ರ್ಯವಿರಲಿಲ್ಲ. ಯಾಕೆಂದರೆ ಅದು ಧಾರ್ಮಿಕ ಕೃತಿಯಾದ ಕಾರಣ. ಸಂದರ್ಭದಲ್ಲಿ ತೀ. ನಂ. ಶ್ರೀಕಂಠಯ್ಯನವರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಉದ್ಧರಿಸುವದು ಸೂಕ್ತವೆನಿಸುತ್ತದೆ. ಅದೇನೆಂದರೆ, "ಆದಿಪುರಾಣ ರಚನೆಯ ಪಂಪನು ಕೈಕಟ್ಟಿಸಿಕೊಂಡು ಪಟ್ಟುಗಳನ್ನು ತೋರಿಸುವ ಗರಡಿಯಾಳಿನಂ ಕಾಣಿಸುತ್ತಾನೆ. ಆದರೂ ಇದರಲ್ಲಿ ಪಂಪನು ಜೈನ ಧರ್ಮದ ಒಳತಿರುಳನ್ನು ರಮ್ಯವಾಗಿ ನಿರೂಪಿಸಿದ್ದಾನೆ" ಎಂದಿದ್ದಾರೆ. ಆದರೆ, ಪಂಪಭಾರತದಲ್ಲಿ ಕವಿಯ ಪ್ರತಿಭೆ ಗರಿಬಿಚ್ಚಿ ಸ್ವತಂತ್ರವಾಗಿ ನರ್ತಿಸಿದೆ. ವ್ಯಾಸಭಾರತವನ್ನು ಹದಿನಾಲ್ಕು ಆಶ್ವಾಸಗಳಲ್ಲಿ ಕನ್ನಡಿಕರಿಸುವಲ್ಲಿ ಮಹಾಕವಿ ಪಂಪನು ಸ್ವಂತಿಕೆಯನ್ನು ವಿನೂತನತೆಯನ್ನು ಹಲವು ಕಡೆಗಳಲ್ಲಿ ಮೆರೆದಿದ್ದಾನೆ.

ಪಂಪನು ಸೃಜಿಸಿದ ಹಲವು ಹೊಸ ಸೃಷ್ಟಿಗಳಲ್ಲಿ ಪ್ರತಿನಾಯಕ ಪಾತ್ರವು ಒಂದು. ಇದು ಪಂಪನ ಅತ್ಯದ್ಭುತ ಪರಿಕಲ್ಪನೆ. ಇದನ್ನು ನಂತರದಲ್ಲಿ ರನ್ನ ಹಾಗೂ ನಾಗಚಂದ್ರ ಮೊದಲಾದ ಕವಿಗಳಲ್ಲೂ ಕಾಣುತ್ತೇವೆ. ಅರ್ಜುನ ಪಂಪಭಾರತದ ಕಥಾನಾಯಕನಾದರೆ, ಕರ್ಣ ಅವನ ಪ್ರತಿನಾಯಕ. ಪಂಪನನ್ನು ಅನುಸರಿಸಿ ರನ್ನ ತನ್ನ "ಗದಾಯುದ್ಧ"ದಲ್ಲಿ ಭೀಮನ ಪ್ರತಿನಾಯಕನನ್ನಾಗಿ ದುರ್ಯೋಧನನನ್ನು, ನಾಗಚಂದ್ರ ಕವಿಯು ರಾಮಚಂದ್ರ ಚರಿತ ಪುರಾಣ(ಪಂಪ ರಾಮಾಯಣ)ದಲ್ಲಿ ರಾಮನಿಗೆ ಪ್ರತಿನಾಯಕನಾಗಿ ರಾವಣನನ್ನು ಚಿತ್ರಿಸಿದ್ದನ್ನು ಇಲ್ಲಿ ನೆನೆಯಬಹುದಾಗಿದೆ.

ಕರ್ಣ ಮಹಾಭಾರತದಲ್ಲಿ ದುರಂತ ವ್ಯಕ್ತಿ. ಕರ್ನಾಟಕ ಷೇಕ್ಸ್‌ಪಿಯರ್‌ನೆಂದು ಹೆಸರಾದ ಕಂದಗಲ್ಲ ಹನಮಂತರಾಯರು ಕರ್ಣನನ್ನು ಕುರಿತು "ದೈವ ದುರಂತ

ಕರ್ಣ" ಎಂಬ ಹೆಸರಿನ ನಾಟಕವನ್ನು ರಚಿಸಿದ್ದಾರೆ. ಅವನು ದುರಂತ ನಾಯಕನಾದರೂ ಅವನ ಕರುಣಾದ ಕಥೆ ಸಮಸ್ತ ಸಹೃದಯರ ಮನಸ್ಸನ್ನು ಸೂರೆಗೊಳ್ಳುತ್ತದೆ. ಯಾಕೆಂದರೆ ಅವನಲ್ಲಿದ್ದ ಪರಾಕ್ರಮ, ಸತ್ಯ, ತ್ಯಾಗ, ಸ್ವಾಮಿನಿಷ್ಠೆ ಮಿತ್ರತ್ವ ಇವೆಲ್ಲ ಗುಣಗಳು ಓದುಗರನ್ನು ಆಕರ್ಷಿಸುತ್ತವೆ. ಕರ್ಣನ ಸದ್ಗುಣಗಳೆ ಅವನ ದುರಂತಕ್ಕೆ ಕಾರಣವಾದವು. ಇಂದ್ರ, ಕೃಷ್ಣ, ಕುಂತಿ, ದುರ್ಯೋಧನ ಮೊದಲಾದವರು ಅವನ ಗುಣಗಳನ್ನು, ಆದರ್ಶಗಳನ್ನು ದುರುಪಯೋಗ ಪಡಿಸಿಕೊಂಡು ಅವನನ್ನು ವಂಚಿಸಿ, ದುರಂತ ವ್ಯಕ್ತಿಯನ್ನಾಗಿಸಿದರು. ಆತನ ದುರಂತ ಕಥೆ ಅವನ ಹುಟ್ಟಿನೊಂದಿಗೆ ಆರಂಭವಾಗಿ ಸಾವಿನೊಂದಿಗೆ ಮುಕ್ತಾಯವಾಗುತ್ತದೆ.

ಪಂಪನಂತೂ ತನ್ನ ಪಂಪಭಾರತದಲ್ಲಿ ಪ್ರತಿನಾಯಕನಾದ ಕರ್ಣನ ವ್ಯಕ್ತಿತ್ವ(ಪಾತ್ರ)ವನ್ನು ಬಹು ಮಹೋಜ್ವಲವಾಗಿ ಚಿತ್ರಿಸಿದ್ದಾನೆ. ಆತನ ನನ್ನಿ(ಸತ್ಯ), ಚಾಗ(ದಾನಗುಣ), ಅಣ್ಮು(ಪರಾಕ್ರಮ), ನಿಸ್ವಾರ್ಥ(ನಿರ್ಮಲ)ಸ್ನೇಹ, ನಿಷ್ಕಪಟ ಸ್ವಾಮಿನಿಷ್ಠೆ ಮೊದಲಾದ ಗುಣಾದರ್ಶಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾನೆ. ಪ್ರಸಂಗ ಬಂದಾಗಲೆಲ್ಲ ಕವಿ ರಾಧೇಯನನ್ನು ಹೊಗಳುತ್ತಾ ಹೊಗಳುತ್ತಾ ಕಾವ್ಯ ನಾಯಕನಾದ ಪಾರ್ಥನನ್ನು ಪಕ್ಕಕ್ಕೆ ಸರಿಸಿಬಿಟ್ಟಿದ್ದಾನೆ ಎಂಬ ಭಾವನೆ ಸಹೃದಯರಲ್ಲಿ ಬರದಿರದು. ವಿಮರ್ಶಕರು ಪಂಪ ಮಹಾಕವಿಗೆ ವಿಸ್ಮೃತಿ ಆವರಿಸಿದೆಂಬುದನ್ನು ಸಾಕ್ಷಿಕರಿಸುವಂತಯೋ, ಓದುಗರು ಅತಿಶಯೋಕ್ತಿ ಎನ್ನುವಂತೆಯೋ ಕರ್ಣನನ್ನು ಬಿಂಬಿಸಿರುವನು. ಇದಕ್ಕೆ ಪದ್ಯಗಳನ್ನು ಉದಾಹರಿಸುವದಾದರೆ-

**"ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ**
**ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ದೊರೆ ಕರ್ಣನೇಱು**
**ಕರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕರ್ಣನ**
**ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ"**

**"ಕರ್ಣಂಗಂಡಲ್ತೆ ಕಲ್ತರ್ ನುಡಿವ ಪಸುಗೆಯಂ ಗಂಡರಾ ಗಂಡವಾತುಂ**
**ಕರ್ಣಂ ಮುಂ ಪುಟ್ಟೆ ಪುಟ್ಟಿತ್ತಳವಮದೊಡವುಟ್ಟಿತ್ತು ಪೂಣ್ದೇವಚಾಗಂ**
**ಕರ್ಣಂಗೊಡ್ಡಿತ್ತು ದಲ್ ಭಾರತಮೆನೆ ಜಗದೊಳ್ ಸಂದನೇಂ ಸಂದೊಡಾ**

ಕರ್ಣಾಂತಾಕೃಷ್ಣ ಬಾಣಾವಳಿಯೊಳೆ ಹರಿಗಂ ಕರ್ಣನಂ ನಾಳೆ ಕೊಲ್ಲುಂ".

'ಮಹಾಭಾರತದಲ್ಲಿ ನೆನೆಯಲು ಅರ್ಹನಾಗಿರುವವನೆಂದರೆ ಕರ್ಣ ಮಾತ್ರ, ಅವನನ್ನು ಒಮ್ಮನದಿಂದ ಸ್ಮರಿಸಿ, ಆತನಿಗೆ ಸರಿಸಮಾನರಾದವ ಯಾರಿದ್ದಾರೆ? ಅವನ ಪರಾಕ್ರಮ, ಸತ್ಯ, ಪೌರುಷ, ತ್ಯಾಗ ಹಾಗೂ ಮಾತುಗಳಿಂ ತುಂಬಿದ ಮಹಾಭಾರತವು ಕರ್ಣರಸಾಯನವಾಗಿದೆ' ಎನ್ನುವ ಪಂಪನ 'ಕರ್ಣನನ್ನು ಅನುಸರಿಸಿಯೇ ಶೂರರು ವಿವೇಕದ ಮಾತುಗಳನ್ನು ಆಡಲ ಕಲಿತರಂತೆ. ಗಂಡೆದೆಯ ಮಾತುಗಳು ಅವನು ಜನಿಸಿದ ಮೇಲೆ ಹುಟ್ಟಿದವಂ ಸಾಹಸದೊಂದಿಗೆ ತ್ಯಾಗವೂ ಸಹ ಅವನೊಂದಿಗೆ ಹುಟ್ಟಿದವು. ಅಷ್ಟೇ ಮಹಾಭಾರತ ಯುದ್ಧವು ಅವನಿಗಾಗಿಯೇ ಏರ್ಪಟ್ಟಿದೆ' ಎಂದು ಹೇಳುವಾ ತನ್ನ ಕಥಾನಾಯಕನನ್ನು ಸಂಪೂರ್ಣವಾಗಿ ಮರೆತ್ತಿದ್ದಾನೆ ಎನಿಸುತ್ತದೆ.

ಕರ್ಣನ ವ್ಯಕ್ತಿತ್ವವನ್ನು ಕವಿ ಅಲ್ಲಲ್ಲಿ ಬಹುಸೊಗಸಾಗಿ ನಿರೂಪಿಸಿದ್ದಾನೆ.

ಇನತನೂಜನ ನನ್ನಿ, ಚಾಗ, ಅಣ್ಮು ಮೊದಲಾದವುಗಳನ್ನು ಲೋಕದ ಜನ ಹೊಗಳುವುದನ್ನು ಕೇಳಿ, ಆತನ ಜಗತ್ಪ್ರಸಿದ್ಧಿಯನ್ನು ಕೇಳಿ ದೇವಲೋಕದ ಒಡೆಯನಾದ ಇಂದ್ರನು ಕರ್ಣನ ಬಳಿ ದಾನ ಕೇಳಲು ಬ್ರಹ್ಮಚಾರಿಯ ವೇಷದಲ್ಲಿ ಬಂದಿರುತ್ತಾನೆ. ಮುನ್ನಡೆಯಲಿರುವ ಕುರುಕ್ಷೇತ್ರ ಯುದ್ಧದಲ್ಲಿ ಕರ್ಣನ ವಿರುದ್ಧ ತನ್ನ ಮಗ ಅರ್ಜುನ ಗೆಲುವು ಸಾಧಿಸಬೇಕಾದರೆ ಅವನಿಂದ ಕವಚ ಕುಂಡಲಗಳನ್ನು ದಾನದ ರೂಪದಲ್ಲಿ ಪಡೆದರೆ ಮಾತ್ರ ಸಾಧ್ಯ ಎಂದು ಭಾವಿಸಿ ಬಂದಿದ್ದನು. ದೇವೇಂದ್ರನು ಕೇಳಿದ ಕವಚವನ್ನು"ಅಲ್ಲಾಡದೆ ಕೊಳ್ಳೆಂದರಿದೀಡಾಡಿದಸಿಂದ್ರಂಗೆ ಕವಚಮಂ ರಾಧೇಯಂ" ಎಂದು ಕರ್ಣನ ದಾನದ ವೈಶಿಷ್ಟ್ಯತೆಯನ್ನು ಕವಿ ಬಾಯ್ತುಂಬ ಹೊಗಳಿರುವನು.

"ಎಂದುಂ ಪೋಗೆಂದನೆ ಮಾ
ಣೆಂದನೆ ಪೆರತೊಂದನೀವೆನೆಂದನೆ ನೊಂದಃ
ಎಂದನೆ ಸೆರಗಿಲ್ಲದೆ ಪಿಡಿ
ಯೆಂದನಿದೇ ಕಲಿಯೊ ಚಾಗಿಯೋ ರವಿತನಯಂ"

ಪಾಂಡವರು ಹನ್ನೆರಡು ವರ್ಷ ವನವಾಸವನ್ನು ಹಾಗೂ ಒಂದು ವರ್ಷ ಅಜ್ಞಾತವಾಸವನ್ನು ಮುಗಿಸಿದ ಮೇಲೆ ಶ್ರೀಕೃಷ್ಣನನ್ನು ಸಂಧಿಗಾಗಿ ದುರ್ಯೋಧನನ

ಬಳಿ ಕಳಿಸಿಕೊಡುತ್ತಾರೆ. ಒಪ್ಪಂದಕ್ಕಾಗಿ ಹಸ್ತಿನಾವತಿಗೆ ಬಂದ ಶ್ರೀಕೃಷ್ಣ ಕಾರ್ಯ ಫಲಿಸದೇ ಯುದ್ಧ ಅನಿವಾರ್ಯವಾಯಿತು. ಆಗ ಕೃಷ್ಣ ಅಲ್ಲಿಂದ ಹಿಂತಿರುಗಿ ಬರುವ ಮೊದಲು ಕುಂತಿಗೆ ರಹಸ್ಯವಾಗಿ ಭೇಟಿಯಾಗಿ ನಿಮ್ಮ ಹಿರಿಯ ಮಗ ಕರ್ಣನನ್ನು ಪಾಂಡವರ ಕಡೆಗೆ ಬರುವಂತೆ ಪ್ರಯತ್ನಿಸುವೆ, ನೀವೂ ಅವನನ್ನು ಭೇಟಿಯಾಗಿ ಹಾಗೇ ಮಾಡಿ ಎಂದು ಹೇಳಿ ಕರ್ಣನ ಮನೆಯ ಹತ್ತಿರ ಬಂದು ಅವನನ್ನು ಮಾತನಾಡಿಸಿ, ತನ್ನನ್ನು ಸ್ವಲ್ಪ ದೂರ ಕಳುಹಿಸಿ ಬರುವಂತೆ ಬಾ ಎಂದು ರಥದಲ್ಲಿ ಕರ್ಣನನ್ನು ತನ್ನ ಪಕ್ಕದಲ್ಲಿ ಕುಳ್ಳರಿಸಿಕೊಂಡು ಮುಂದೆ ಬಂದು, ಒಂದಡೆ ರಥವನ್ನು ನಿಲ್ಲಿಸಿ ಅವನ ಮನಃಪರಿವರ್ತನೆಗೆ ಮುಂದಾದನು. ಆ ಸನ್ನಿವೇಶವನ್ನು ಪಂಪ ಚೆನ್ನಾಗಿ ಚಿತ್ರಿಸಿದ್ದಾನೆ. ಮೊದಲಿಗೆ ಕೃಷ್ಣ ಕರ್ಣನನ್ನು ಉದ್ದೇಶಿಸಿ,

**"ಭೇದಿಸಲೆಂದು ದಲ್ ನುಡಿದರೆನ್ನದಿರೊಯ್ಯನೆ ಕೇಳ ಕರ್ಣ ನಿ**
**ನ್ನಾದಿಯೊಳಬ್ಬೆ ಕುಂತಿ ನಿನಗಮ್ಮನಹರ್ಪತಿ ಪಾಂಡುನಂದನರ್**
**ಸೋದರರೆಯ್ದೆ ಮಯ್ದುನನೆನಾಂ ಪೆಱತೇಂ ಪಡೆಮಾತೊ ನಿನ್ನದೀ**
**ಮೇದಿನಿ ಪಟ್ಟಮುಂ ನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ"**

ಎಂದು ಅವನ ಜನ್ಮ ವೃತ್ತಾಂತವನ್ನು ತಿಳಿಸಿ, ನೀನು ಪಾಂಡವರ ಅಗ್ರಜ ಎಂದು ಗೊತ್ತಾದ ಕೂಡಲೇ ದುರ್ಯೋಧನನು "ಪಾಟಿಸುವೆನೊಯ್ಯನೆ ಮುಳ್ಳೊಳೆ ಮುಳ್ಳನೆಂದು ನಿನ್ನನ್ನು ಪ್ರೀತಿಯಿಂದ ಪೋಷಿಸಿದನೆಂದು" ತಿಳಿಸಿದನು. ಇದನ್ನು ಕೇಳಿ ರಾಧೇಯನಿಗೆ ತಾನು ಪಾಂಡವರ ಹಿರಿಯ ಎನ್ನುವ ಸಂತೋಷ ಒಂದೆಡೆಯಾದರೆ, ಅನ್ನ ಹಾಕಿ ಪೋಷಿಸಿ ಬೆಳೆಸಿದ ಗೆಳೆಯ ದುರ್ಯೋಧನನಿಗೆ ದ್ರೋಹ ಮಾಡುವ ದುಃಸ್ಥಿತಿ ಬರುತ್ತದೆನೋ ಎನ್ನುವ ಆತಂಕದ ದುಃಖ ಇನ್ನೊಂದೆಡೆ ಆಯಿತು. ಈ ಉಭಯ ಸಂಕಟದಲ್ಲಿ ನೊಂದು ಬೆಂದನು ಕರ್ಣ. ಕೊನೆಗೂ ಸಾವರಿಸಿಕೊಂಡು ರವಿಸುತನು(ಕರ್ಣ) ತನ್ನ ಹಾಗೂ ಒಡೆಯ ದುರ್ಯೋಧನನ ನಡುವಿನ ಪವಿತ್ರ ಸ್ನೇಹದ ದೃಷ್ಟಾಂತವೊಂದನ್ನು ಹೇಳುತ್ತಾನೆ.

**"ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ**
**ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ**

ಳ್ಕುತ್ತಿರೆಯೀವಮಿಲ್ಲದಿವನಾಯ್ದುದೊ ತಪ್ಪದೆ ಪೇಟಿಮೆಂಬ ಭೂ
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲೆನೆ"

ದುರ್ಯೋಧನನು ತನ್ನ ಅರಸಿ(ಮಡದಿ) ಭಾನುಮತಿಯೊಂ ಪಗಡೆಯಾಡಲು ನನಗೆ ಅನುಮತಿ ನೀಡಿದ್ದಲ್ಲದೆ. ಅವಳು ಸೋತಾಗ ಅತಿಂ ಕೊರಳ ಮುತ್ತಿನ ಸರಕ್ಕೆ ನಾ ಕೈ ಹಾಕಿದಾಗ ಅದು ಹರಿದು ಹೋಗಿ ಮುತ್ತುಗಳ ನೆಲದಮೇಲೆ ಬಿದ್ದಾಗ, ಹೆದರಿಕೊಂಡಿದ್ದ ನನ್ನನ್ನು ನೋಡಿ ಗೆಳೆಯಾ, ಮುತ್ತುಗಳ ಆಯ್ದುಕೊಡಲೆ ಎಂದು ಕೇಳಿದನು. ದುರ್ಯೋಧನನು "ಎನಗೆ ಕೆಳೆಯ ರಾಧೇಯನಾ" ಎಂದಂತೆ ನಡೆದುಕೊಂಡಿದ್ದಾನೆ. ಸ್ನೇಹಕ್ಕೆ ಒಂದ ವ್ಯಾಖ್ಯಾನದಂತಿರುವ ಕುರುನಾಯಕನಿಗೆ ದ್ರೋಹ ಮಾಡಿ ಪಾಂಡವರ ಪ ಸೇರಿದರೆ ನಾನು ಯಾರಿಗೂ ಬೇಡವಾಗುತ್ತೇನೆ ಎಂದು ಹೇಳಿ ಕೃಷ್ಣನನ ನಿರಾಸೆಗೊಳಿಸಿ, ತಾನು ಮಾತ್ರ ಕೌರವ ಸೈನ್ಯದಲ್ಲಿಯೇ ಉಳಿದು ಸೇನಾಧಿಪತಿಯಾ ಹೋರಾಡಿ ತನ್ನ ಸ್ವಾಮಿನಿಷ್ಠೆಯನ್ನು ತೋರಿದನು.

ಕರ್ಣನಲ್ಲಿದ್ದ ಇನ್ನೊಂದು ಗುಣವೇನೆಂದರೆ ನುಡಿದಂತೆ ನಡೆಯುವದ ಕೃಷ್ಣನ ಮಾತಿನಂತೆ ಕುಂತಿ ಕರ್ಣನ ಬಳಿಬಂದು ಅವನಿಂದ ವಚನ(ಆಣೆ ಪಡೆಯುವದು. ತನ್ನ ಹತ್ತಿರ ಬಂದ ತಾಯಿ ಕುಂತಿಗೆ ನಮಸ್ಕರಿಸಿ, ಓೀಗೆಂದನ

"ಚಲಮುಂ ಚಾಗಮುಮಳವುಂ
ಕಲಿತನಮುಂ ಕುಲಮುಮೀಗಳೆನ್ನಯ ಮೆಯ್ಯೊಳ್
ನೆಲಸಿದವು ನಿಮ್ಮ ಕರುಣಾ
ಬಲದಿಂ ನೀವೆನ್ನನಿಂದು ಮಗನೆಂದುದರಿಂ"

ಕುಂತಿ, ತನ್ನನ್ನು ಮಗನು ಎಂದು ಹೇಳಿದ್ದರಿಂದ ಇಂದು ತನ್ನಲ್ಲಿ ಚಲ ಚಾಗ, ಕಲಿತನ ಹಾಗೂ ಕುಲಗಳು ನೆಲಸಿದವು ಎಂದು ಹೇಳುತ್ತ ತಾಯಿಯ ಶಕ್ತಿಯನ್ನು ಸ್ತುತಿಸಿದನು.

ಕುಂತಿ ಅವನನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಮಾಡಿದ ಪ್ರಯತ್ನಗಳ ವಿಫಲವಾಗಿ ತನ್ನ ಮಕ್ಕಳ ಮೇಲಿನ ಆಶೆಯನ್ನು ಬಿಟ್ಟಿದ್ದೇನೆಂದು ದುಃಖಪಡುತ್ತಿದ್ದಾಗ ತಾಯಿಯನ್ನು ಸಮಾಧಾನಪಡಿಸಿ ಅವಳಿಗೆ ಮಾತು ಕೊಟ್ಟ

"ಪಿಡಿಯೆಂ ಪುರಿಗಣೆಯಂ ನರ
ನೆಡೆಗೊಂಡೊಡಮುಟಿದ ನಿನ್ನ ಮಕ್ಕಳನಿನ್ನೇ

**ದೊರೆಡಮಟೆಯಿಂ ಪೆರ್ಚಿಸಮೆಸೆ**
**ಒಡಿದೆನ್ನನೆ ರಣದೊಳಟಿವೆನಿರದರಿಯುತ್ತಿಂ"**

ಕುಂತಿಗೆ ಕೊಟ್ಟ ಮಾತಿನಂತೆ ಕುರುಕ್ಷೇತ್ರ ಯುದ್ಧದಲ್ಲಿ ಹೋರಾಡಿ ವೀರ ಮರಣವನ್ನು ಹೊಂದಿದನು.

ತನ್ನ ಒಡೆಯ, ಸ್ನೇಹಿತ ದುರ್ಯೋಧನನ ವೈರಿಗಳೆ ತನ್ನ ಶತ್ರುಗಳು. ಅವರನ್ನು ಸಂಹರಿಸಿ ಗೆಲುವು ತಂದುಕೊಡುವ ಮೂಲಕ ಅವನ ಋಣ ತೀರಿಸಬೇಕೆಂಬ ಕೆಚ್ಚು ಕರ್ಣನದು. ದುರ್ಯೋಧನನು ಭೀಷ್ಮರಿಗೆ ಕೌರವ ಸೈನ್ಯದ ಸೇನಾಪತಿಯನ್ನಾಗಿ ಮಾಡಿದಾಗ ಕರ್ಣ ಅಸಮಾಧಾನಗೊಂಡಿದ್ದು ಈ ಕಾರಣಕ್ಕಾಗಿಯೇ. ಅಂದರೆ ತನಗೆ ವೀರಪಟ್ಟವನ್ನು ಕಟ್ಟಲಿಲ್ಲ ಎಂಬುದಕ್ಕೆ. ಈ ಸಂದರ್ಭದಲ್ಲೂ ಪಂಪನು ಕರ್ಣನ ವ್ಯಕ್ತಿತ್ವದ ಮತ್ತೊಂದು ಮುಖವನ್ನು ಪರಿಚಯಿಸಿದ್ದಾನೆ.

ಗಂಗಾಮಾತೆಯ ಮಗನಾದ ಭೀಷ್ಮಾಚಾರ್ಯರಿಗೆ ಸೇನೆಯ ನಾಯಕ ಸ್ಥಾನ ನೀಡಿದ್ದನ್ನು ಕಂಡು ಅವರನ್ನು, ಅವರ ಶಕ್ತಿಯನ್ನು ಗೇಲಿಮಾಡುತ್ತಾನೆ.

**"ಕಟ್ಟಿದ ಪಟ್ಟಮೆ ಸರವಿಗೆ**
**ನೆಟ್ಟನೆ ದೊರೆ ಪಿಡಿದ ಬಿಲ್ಲೆದಂಟಂಗೆಣೆ ಕ**
**ಣ್ಗೆಟ್ಟ ಮುದುಪಂಗೆ ಪಗೆವರ**
**ನಿಟ್ಟೆಲ್ವಂ ಮುಱಿವೊಡೆನಗೆ ಪಟ್ಟಂಗಟ್ಟಾ"**

ಎಂದುದಲ್ಲದೆ "ಭೀಷ್ಮರು ಪಾಂಡವರನ್ನು ಪ್ರೀತಿಯ ಮೊಮ್ಮಕ್ಕಳೆಂದು ಅವರನ್ನು ವಿರೋಧಿಸಿ ಹೋರಾಡುವದಿಲ್ಲ. ಪಾಂಡುನಂದನರು ಸಹ ಅಜ್ಜ ಭೀಷ್ಮರನ್ನು ಎದುರಿಸಲಾರರು. ಹೀಗಿರುವಾಗ ನೀನು ಭೀಷ್ಮರನ್ನು ಹೇಗೆ ನಂಬುತ್ತೀಯೇ? ಎಂದನು. ಕರ್ಣನು ಮಾಡುತ್ತಿರುವ ಭೀಷ್ಮರ ನಿಂದನೆಯನ್ನು ಕೇಳಿ ಕೋಪಗೊಂಡು ಗುರು ದ್ರೋಣಾಚಾರ್ಯರು ಕರ್ಣನಿಗೆ "ಸಿಂಗದ ಮುಪ್ಪು ನೆಗಟ್ಟೇ ಗಾಂಗೇಯರ ಮುಪ್ಪುಮಿಟೆಕೆವಡೆಗುಮೆ" ಎಂದು ಪ್ರತಿಕ್ರಿಯಿಸುತ್ತ ತುಂಬಿದ ಸಭಾ ಮಧ್ಯದಲ್ಲಿ ಅವರನ್ನು ಅವಮಾನಿಸುವ ನಿನ್ನ ನಾಲಿಗೆ ನಿನ್ನ ಕುಲವನ್ನು ತಿಳಿಸುತ್ತದೆ ಎಂದಾಗ ಕುಪಿತನಾದ ಕರ್ಣನು ಅದಕ್ಕೆ ಪ್ರತಿಯಾಗಿ

**“ಕುಲಮನೆ ಮುನ್ನಮುಗ್ಗಡಿಪಿರೇಂಗಳ್ ನಿಮ್ಮ ಕುಲಂಗಳಾಂತು ಮಾ**
**ರ್ಮಲೆವನನಟ್ಟಿ ತಿಂಬುವೆ ಕುಲಂ ಕುಲಮಲ್ತು ಚಲಂ ಕುಲಂ ಗುಣಂ**
**ಕುಲಮಭಿಮಾನಮೊಂದೆ ಕುಲಮಣ್ಮು ಕುಲಂ ಬಗೆವಾಗಳೀಗಳೀ**
**ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗಂ”**

ಎಂದು ಉಗ್ಗಡಿಸಿದನು. ಭೀಷ್ಮರು ಸೇನಾಪತಿಯಾಗಿರುವವರೆಗೆ ತಾನು ಯುದ್ಧ ಮಾಡುವದಿಲ್ಲವೆಂದು ಪ್ರತಿಜ್ಞೆ ಮಾಡಿದನು. ಆಗ ಭೀಷ್ಮರು ಕರ್ಣನನ್ನು ಉದ್ದೇಶಿಸಿ

**“ಕಲಿನತದುರ್ಕು ಜವ್ವನದ ಸೊರ್ಕು ನಿಜೇಶ್ವರ ನಚ್ಚು ಮಿಕ್ಕ ತೋ**
**ಳ್ಬಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನಗುಂಟೆ ಭಾರತಂ**
**ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂ**
**ಚಲೆದಪೆಯಣ್ಣ ಸೊಟ್ಪಿಡೆಯಲಪ್ಪುದು ಕಾಣಮಹಾಜಿರಂಗದೊಳ್”**

ಈ ಮಹಾಭಾರತ ಯುದ್ಧದಲ್ಲಿ ಹೋರಾಡುತ್ತಿರುವವನು ಅರ್ಜುನ. ಪಾಂಡವರನ್ನು ಸೋಲಿಸುವುದಕ್ಕಾಗಿ ಕುರುಪತಿಯು ಸೇನಾಪತಿಗಳನ್ನು ಬದಲು ಮಾಡುತ್ತಾನೆ. ಸೇನಾಪತಿಯಾಗುವ ಸರದಿಯಲ್ಲಿ ನಿನಗೂ ಆ ಅವಕಾಶ ಬರುತ್ತದೆ. ಸ್ವಲ್ಪ ತಾಳಿಕೋ ಎಂದು ಹೇಳಿದರು.

ಭೀಷ್ಮರು ಹೇಳಿದಂತೆ ಕರ್ಣನಿಗೆ ವೀರಪಟ್ಟ ಕಟ್ಟುವ ಸಂದರ್ಭ ಬಂತು. ದ್ರೋಣಾಚಾರ್ಯರು ಮಡಿದ ಮೇಲೆ ಕೌರವರಲ್ಲಿ ಯಾರಿಗೆ ಸೇನಾಪತಿ ಪಟ್ಟವನ್ನು ಕಟ್ಟಬೇಕು ಎಂಬ ಪ್ರಶ್ನೆ ಬಂದಾಗ ಸಭೆಯಲ್ಲಿದ್ದ ಕೃಪನು

**“ನೆಗಟ್ದಿ ಕಲಿತನದ ಚಾಗದ**
**ಬಗೆ ತನ್ನೊಳ್ ನೆಗಟ್ತೆವೆತ್ತು ನೆಗಟ್ದಿರೆ ಸಂದಂ**
**ಗಗಣಿತ ಗುಣಂಗೆ ಕರ್ಣಂ**
**ಗೊಗಸುಗುಮೇ ಕಟ್ಟು ವೀರಪಟ್ಟಮನರಸಾ”**

ಎಂದು ನುಡಿದುದನ್ನು ಕೇಳಿ ದುರ್ಯೋಧನನು ಕರ್ಣನ ಮುಖವನ್ನು ನೋಡುತ್ತ

**“ನಡುಗುವುದುಂತೆ ಪಾಂಡವ ಬಲಂ ನಿನಗರ್ಜುನನೆಂಬನೆಂದುಮು**
**ರ್ಕುಡುಗಿ ಸುರುಳ್ವನೀಯೆಡೆಗೆ ಪೇಳ್ ಪೆಜಿರಾರ್ ದೊರೆ ವೀರಪಟ್ಟಮಂ**

**ತಡೆಯದೇ ಕಟ್ಟ ವೈರಿಗಳ ಪಟ್ಟನೆ ಪಾಱೆ ಕಾವುದೆನ್ನ ಬೆಳ್ಗೊಡೆಯುಮನೆನ್ನ**
**ಪಟ್ಟಮುಮನೆನ್ನಮನಂಗ ಮಹೀತಳಾದಿಪಂ"**

ಈ ವೀರಪಟ್ಟವನ್ನು ಬೇಗನೇ ಕಟ್ಟಿಕೊಂಡು ಶತ್ರುಗಳು ಹಾರಿಹೋಗುವಂತೆ ಮಾಡಿ ನನ್ನ ಬೆಳ್ಗೊಡೆ: ನನ್ನ ರಾಜಪಟ್ಟವನ್ನು ರಕ್ಷಿಸಬೇಕು ಎಂದು ಕೇಳಿಕೊಂಡು ತಡಮಾಡದೇ ಕರ್ಣನಿಗೆ ಸೇನಾಪತಿ ಪಟ್ಟವನ್ನು ಕಟ್ಟಿದನು.

ಸೇನಾನಾಯಕನಾದ ಬಳಿಕ ಕರ್ಣನು ಶರಶಯನದಲ್ಲಿ ಮಲಗಿದ್ದ ಭೀಷ್ಮರ ಆಶೀರ್ವಾದ ಪಡೆಯಲು ಬಂದು ಮೂರು ಸುತ್ತು ಪ್ರದಕ್ಷಿಣೆ ಹಾಕಿ ಅವರ ಪಾದಾರವಿಂದಗಳಲ್ಲಿ ತಲೆಯಿಟ್ಟು ನಮಸ್ಕರಿಸಿ ತನ್ನ ತಪ್ಪನ್ನು ಮನ್ನಿಸುವಂತೆ ವಿನಂತಿಸಿಕೊಂಡು ಅವರಿಂದ ಆಶೀರ್ವಾದ ಪಡೆದನು. ಭೀಷ್ಮರಿಗೆ ಪಟ್ಟಕಟ್ಟುತ್ತಿದ್ದಾಗ ಅಸಮಾಧಾನಗೊಂಡು ಅವರನ್ನು ಅವಮಾನಪಡಿಸಿದ ಕರ್ಣನೇ ಈಗ ಅವರ ಬಳಿ ಆಶೀರ್ವಾದ ಪಡೆಯಲು ಬಂದದ್ದು ವಿಪರ್ಯಾಸವೆನಿಸಿದರೂ ಅದು ಅವನ ಹೃದಯ ವೈಶಾಲ್ಯತೆಯನ್ನು ಎತ್ತಿ ತೋರುತ್ತದೆ. ಕರ್ಣನನ್ನು ಆಶೀರ್ವದಿಸುತ್ತ ಭೀಷ್ಮರು "ನಿನ್ನನೆ ಮೆಚ್ಚಿದಂ ಕುರುಮಹೀಪತಿ ನಿನ್ನ ಶರಾವಳಿಗಳ್ಗೆ ಮುನ್ನನ್ನಡುಗುತ್ತುಮಿರ್ಪುದರಿಸಾಧನ ಸಂಪದಮ್" ಅದಕ್ಕಾಗಿ ಶಲ್ಯನನ್ನು ಸಾರಥಿಯನ್ನಾಗಿ ಮಾಡಿಕೊಂಡು ಯುದ್ಧಮಾಡು ಎಂದರು. ದುರ್ಯೋಧನನು ತನಗೆ ತುಂಬಿದ ಸಭೆಯಲ್ಲಿ ವೀರಪಟ್ಟ ಕಟ್ಟಿದಾಗ ತನ್ನ ಶೌರ್ಯವನ್ನು ಪ್ರಶ್ನಿಸಿ ಅವಮಾನಪಡಿಸಿದ ಕರ್ಣನು, ತನ್ನ ಬಳಿ ಆಶೀರ್ವಾದ ಪಡೆಯಲು ಬಂದಾಗ ಅವನನ್ನು ಅವಮಾನಪಡಿಸದೇ ಭೀಷ್ಮರು ಆಶೀರ್ವಾದ ಮಾಡಿದರು. ಇದು ಅವರಲ್ಲಿನ ಹಿರಿಮೆಯನ್ನು ತೋರಿಸುತ್ತದೆ. ಇದಕ್ಕಾಗಿಯೇ ಮಹಾಕವಿ ಪಂಪನು ಅವರನ್ನು "ಅತ್ಯುನ್ನತಿಯೊಳಮಾರ ಸಿಂಧೂದ್ಭವಂ" ಎಂದು ಕರೆದಿರಬೇಕೆನಿಸುತ್ತದೆ.

ಭೀಷ್ಮರ ಮಾತಿನಂತೆ ದುರ್ಯೋಧನನು ಮದ್ರ ದೇಶದ ಅರಸ ಶಲ್ಯನನ್ನು ಕರ್ಣನ ಸಾರಥಿಯನ್ನಾಗಿ ಮಾಡಲು ಮುಂದಾದನು. ಆದರೆ ಶಲ್ಯನು ಕೋಪಿಸಿಕೊಂಡು ಇದಕ್ಕೆ ಒಪ್ಪಲಿಲ್ಲ. ಕರ್ಣನ ಕುಲವನ್ನು ಜರಿದ ಮಾವ ಶಲ್ಯನಿಗೆ ದುರ್ಯೋಧನನು

**"ಕುಲಹೀನನೆ ಅಪ್ಪೊಡೆ**
**ವಲಬೋಧಂ ಪರಶುರಾಮನೇನೀಗುಮೆ ನಿ**

ರ್ಮಲಿನಕುಲಂಗಲ್ಲದೆ ಪಿಡಿ
ಯಲಲ್ಲದಂತಪ್ಪ ದಿವ್ಯ ಬಾಣಾವಳಿಯಂ"
"ಮಣಿ ಕುಂಡಲಮುಂ ಕವಚಂ
ಮಣಿಯದ ಚಾರಿತ್ರಮುಗ್ರತೇಜಮುಮೀಯೊ
ಳ್ಗುಣಮುಂ ಕಲಿತನಮುಮವೇಂ
ಪ್ರಣುತಾರೀ ಸೂತಸೂತನೊಳೊಡವುಟ್ಟುಗುಮೇ"
"ಕಲಿತನದ ನೆಗಟ್ದಿ ಕಸವರ
ಗಲಿತನದ ಪೊದಟ್ದಿ ಪರಮಕೋಟಿಗೆ ಪೆಱರಾರ್
ಸಲೆ ಕರ್ಣನಲ್ಲದೆನಿಸುವ
ಕಲಿತನಮಂ ಹರಿಗೆ ಕವಚಮಿತ್ತುದೆ ಪೇಳ್ಗುಂ"

ಕರ್ಣನು ಕುಲಹೀನನಾಗಿದ್ದರೆ ಪರಶುರಾಮರು ಅವನಿಗೆ ದಿವ್ಯಾಸ್ತ್ರವನ್ನು ಕೊಡುತ್ತಿದ್ದರೆ? ಮಣಿಕುಂಡಲ, ಕವಚ, ಉತ್ತಮ ನಡತೆ, ತೇಜಸ್ಸು–ಇವೆಲ್ಲವೂ ಅವನ ಜೊತೆಗೆ ಹುಟ್ಟುತ್ತಿದ್ದುವೇ? ಸಾಹಸ ಉದಾರತೆಯ ಉನ್ನತಿಗೇರಲು ಅವನನ್ನು ಹೊರತುಪಡಿಸಿ ಮತ್ತ್ಯಾರಿದ್ದಾರೆ? ಇಂದ್ರನಿಗೆ ಕವಚವನ್ನು ಕೊಟ್ಟಿದ್ದೆ ಹೇಳುತ್ತದೆಯಲ್ಲವೇ? ಅವನ ಔದಾರ್ಯವನ್ನು ಎಂದು ಕರ್ಣನ ಗುಣಗಾನ ಮಾಡುವ ಮೂಲಕ ಅವನ ಬಗ್ಗೆ ಶಲ್ಯನಲ್ಲಿದ್ದ ಕೀಳರಿಮೆಯು ತೊಲಗುವಂತೆ ನುಡಿದನು.

ಇಲ್ಲಿಯೂ ಪಂಪನು ದುರ್ಯೋಧನನ ಮೂಲಕ ಕರ್ಣನ ಸತ್ಯ, ಸಾಹಸ, ದಾನ ಗುಣಗಳನ್ನು ಹೇಳಿಸಿದ್ದಾನೆ.

ಕರ್ಣಾರ್ಜುನರ ಯುದ್ಧದ ಸಂದರ್ಭದಲ್ಲಿ ಅರ್ಜುನನು ಕರ್ಣನನ್ನು ಕುರಿತು ಮರ್ಮಭೇದಕವಾದ ರೀತಿಯಲ್ಲಿ ಮಾತನಾಡಿದನು. ಅದಕ್ಕೆ ಕೋಪಿಸಿಕೊಳ್ಳದೆ ಕರ್ಣನು ಮುಗುಳ್ನಗುತ್ತ ಪ್ರತಿಕ್ರಿಯಿಸಿದನು. ಆ ಸಂದರ್ಭದಲ್ಲಿ ಅವನ್ನಾಡಿದ ಒಂದು ಮಾತಂತೂ ಆತನ ಮಹೋನ್ನತ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

"ಒಡಲಂ ಪ್ರಾಣಮುಮೆಂಬಿವು
ಕಿಡಲಾದುವು ಜಸಮದೊಂದೆ ಕಿಡದದನಾಂ ಬ
ಲ್ವಿಡಿವಿಡಿದು ನೆಗೞ್ಚಿಮ್ಮೆನುಟಿದಟಿ
ವಡೆಮಾತುಂ ಮಾಡಿ ನೀನೆ ಕೆಮ್ಮನೆ ನುಡಿವೈ"

ದೇಹ, ಪ್ರಾಣ ಇವುಗಳು ನಾಶವಾಗುತ್ತವೆ. ಆದರೆ ಯಶಸ್ಸು ಮಾತ್ರ ಕೆಡದೆ ಶಾಶ್ವತವಾಗಿ ಉಳಿಯುವಂಥದ್ದು. ನಾನು ಅದನ್ನು ಆಶ್ರಯಿಸಿ ಪ್ರಸಿದ್ಧನಾಗಿದ್ದೇನೆ. ನೀನು ಹೀನವಾದ ಮಾತುಗಳಿಂದ ನಿಷ್ಪ್ರಯೋಜಕವಾಗಿ ನುಡಿಯುವದು ಎಷ್ಟು ಸೂಕ್ತ ಎಂದನು. ಕೀರ್ತಿ ಎನ್ನುವ ಆದರ್ಶ ಮೌಲ್ಯ ಹೊಂದಿದವನು ಕರ್ಣ ಎಂಬುದನ್ನು ಹೇಳುತ್ತ, ಆ ಮೌಲ್ಯವನ್ನು ಪಂಪ ಪ್ರತಿಪಾದಿಸಿದ್ದಾನೆ.

ಅರ್ಜುನನು ಪ್ರಯೋಗಿಸಿದ ಅಂಜಲಿ ಕಾಸ್ತ್ರದಿಂದ ಕರ್ಣನು ವೀರ ಮರಣವನ್ನು ಹೊಂದಿದಾಗ ಕವಿಯು ಅವನ ಕುರಿತಾಗಿ ಸ್ತುತಿಸಿದ ಉಕ್ತಿಗಳು ಗಮನಾರ್ಹವಾದವು.

**"ಚಾಗದ ನನ್ನಿಯ ಕಲಿತನ**
**ದಾಗರಮೆನೆ ನೆಗಟ್ದಿ ಕರ್ಣನೊಡಲಿಂದೆಂತುಂ**
**ಪೋಗಲ್ಕಱಿಯದೆ ಸಿರಿ ಕರ**
**ಮಾಗಳ್ ಕರಿಕರ್ಣತಾಳ ಸಂಚಳಯಾದಳ್"**

ದಾನ, ಪ್ರಾಮಾಣಿಕತೆ, ಶೌರ್ಯ- ಇವುಗಳಿಗೆ ಜನ್ಮಭೂಮಿ ಎನಿಸಿದ ಕರ್ಣನನ್ನು ಹೇಗೆ ಬಿಟ್ಟು ಹೋಗಲಿ ಎಂದು ಲಕ್ಷ್ಮಿಯು ಚಲಿಸುತ್ತಿರುವ ಆನೆಯ ಕಿವಿಗಳಂತೆ ಚಂಚಲೆಯಾದಳಂತೆ.

ದೇವತೆಗಳ ಸಮೂಹ ಸಹ ಕರ್ಣನ ಪೌರುಷತನವನ್ನು ಮುಕ್ತಕಂಠದಿಂದ ಹೊಗಳಿತಂತೆ.

**"ಪಿಡಿದನೆ ಪುರಿಗಣೆಯನೆರ**
**ಙ್ನುಡಿದನೆ ಬಳ್ಕಿದನೆ ತಾನೆ ತನ್ನನೆ ಚಲಮಂ**
**ಪಿಡಿದಟಿದನೆಂದು ದೇವರ**
**ಪಡೆ ಗಡಣದೆ ಪೊಗಟ್ದುದಿನತನೂಜನ ಗಂಡಂ"**

ಕುಂತಿಗೆ ಕೊಟ್ಟ ಮಾತಿನಂತೆ ಯುದ್ಧದಲ್ಲಿ ದಿವ್ಯಾಸ್ತ್ರವನ್ನು ಹಿಡಿಯಲಿಲ್ಲ. ನುಡಿದ ಮಾತಿಗೆ ತಪ್ಪಿ ಎರಡನೆಯದನ್ನು ಆಡಲಿಲ್ಲ, ಎಂದೂ ಯಾವುದಕ್ಕೂ ಭಯಪಡಲಿಲ್ಲ. ತನ್ನ ಛಲವನ್ನೇ ಬಲವಾಗಿ ನಂಬಿ ಮಡಿದನು ಎಂದು

ದೇವಸಮೂಹವು ಕರ್ಣನನ್ನು ಸ್ತುತಿಸಿತೆಂದರೆ ಅವನೇನು ಸಾಮಾನ್ಯನೆ? ಎನ್ನುವದು ಕವಿಯ ಉದ್ಗಾರ.

ದುರ್ಯೋಧನ ಕರ್ಣರ ಸ್ನೇಹ, ನಿರ್ಮಲವಾದ, ನೈಜವಾದ ಗೆಳೆತನಕ್ಕೆ ಅತ್ಯುತ್ತಮ ವ್ಯಾಖ್ಯಾನದಂತಿದೆ. ಅವರ ಸ್ನೇಹದಲ್ಲಿ ಆತ್ಮೀಯತೆ, ಸಲುಗೆ ಇತ್ತು. ಪರಸ್ಪರ ಒಬ್ಬರನ್ನೊಬ್ಬರು ಅಗಲಿ ಇರುತ್ತಿರಲಿಲ್ಲ. ದುಶ್ಶಾಸನ ಕರ್ಣರು ದುರ್ಯೋಧನನಿಗೆ ಎಡಬಲಗಳಾಗಿದ್ದರು. ಅವರಿಬ್ಬರನ್ನು ಮುಂದಿರಿಸಿಕೊಂಡು ಪ್ರತಿಯೊಂದನ್ನು ಮಾಡುತ್ತಿದ್ದ ಕುರುನಾಯಕ ಅವರಿಲ್ಲದೆ ಏಕಾಂಗಿಯಾಗಿ ಅತಿ ದುಃಖಿತನಾಗಿದ್ದಾನೆ. ಮಿತ್ರನ ಸಾವಿನಿಂದ ಮೂರ್ಛಾಗತನಾಗಿ ಬಿದ್ದ ದುರ್ಯೋಧನನು ಎಚ್ಚೆತ್ತುಕೊಂಡು ಕರ್ಣನ ಕಳೆಬರಹವನ್ನು ಕಂಡು ಕಣ್ಣೀರು ಹಾಕುವ ಪ್ರಸಂಗವಂತೂ ಹೃದಯ ವಿದ್ರಾವಕವಾದುದು.

"ನೀನುಮಗಲ್ದೆಯಿನ್ನೆನಗೆ ಪೇೞ್ ಪೞಿರಾರೆನಗಾಸೆ ನಿನ್ನನಿ
ನಾನುಮಗಲ್ವೆನೇ ಕೆಳೆಯ ಬೆನ್ನನೆ ಬಂದಪೆನಾಂತರಂ ಯವ
ಸ್ಥಾನಮನೆಯ್ದಿಸುತ್ತಿದುವೆ ದಂದುಗಮೆಂತೆರ್ದೆಮುಟ್ಟೆ ಕೂರ್ತ ಪೇೞ್
ಮಾನಸವಾಟಿನಂಗವಿಷಯಾಧಿಪ ನೀಂ ಪೊೞಗಾಗೆ ಬಾೞ್ವೆನೇ"
"ಒಡಲೆರಡೊಂದೆ ಜೀವಮಿವರ್ಗೆಂಬುದ ನೆಂಬುದು ಲೋಕಮೀಗಳಾ
ನುಡಿ ಹುಸಿಯಾಯ್ತು ನಿನ್ನಸು ಕಿರೀಟಿಯ ಶತಶರಂಗಳಿಂದೆ
ಪೋಪೊಡಮೆನಗಿನ್ನುಮೀಯೊಡಲೊಳಿರ್ದುದು ನಾಣಲಿ ಜೀವಮೆಂದೆದೊಡಾ
ವೆಡೆಯೊಳೆ ನಿನ್ನೊಳೆನ್ನ ಕಡುಗೂರ್ಮೆಯುಮಟ್ಟಿಪೆಮಂಗವಲ್ಲಭಾ"

"ಅಱಿಯಂ ಸೋದರನೆಂದು ಧರ್ಮತನಯಂ ನಿರ್ವ್ಯಾಜದಿಂ ನಿನ್ನನಾ
ನರಿವೆಂ ಮುನ್ನಱಿದಿರ್ದುಮೆನ್ನರಸ ನಾನೇಕಿತ್ತೆನಿಲ್ಲೇಕೆ ಪೇ
ೞಱಿಪಲ್ಕೊಲ್ದೆನುಮಿಲ್ಲ ಕಾರ್ಯವಶದಿಂ ಕೂರ್ಪಂತೆವೊಲ್ ನಿನ್ನನಾಂ
ನೆಱೆ ಕೊಂದೆಂ ಮುಳಿಸಿದಮಂಗನೃಪತಿ ಕೌಂತೇಯರೇಂ ಕೊಂದರೇ"

"ನೆಲನಂ ಕೊಟ್ಟನಿನಾತ್ಮಜಾತನೆನಗಾಂ ತಕ್ಕೂರ್ಮೆಯಿಂದಂ ಜಳಾಂ
ಜಲಿಯಂ ಕೊಟ್ಟೆನುವಿಲ್ಲ. ಸೂರ್ಯತನಯಂ ತೇಜೋಗ್ನಿಯಿಂದಂ ದ್ವಿಷ
ದ್ಬಲಮಂ ಸುಟ್ಟನುದಾತ್ತ ಪುಣ್ಯನವನಂ ಚೈತಾಗ್ನಿಯಂ ಸುಟ್ಟೆನಿ
ಲ್ಲೊಲವಿಂದಿರ್ದೆಮುಟ್ಟೆ ಕೂರ್ತನೊಳನೇ ಕರ್ಣಂಗೆ ದುರ್ಯೋಧನಂ"

ಇಲ್ಲಿ ದುರ್ಯೋಧನನ ದುಃಖ, ಪಶ್ಚಾತ್ತಾಪ ವ್ಯಕ್ತವಾಗಿದೆ. ಪ್ರಿಯ ಮಿತ್ರನೆ, ನಿನ್ನನ್ನು ಬಿಟ್ಟು ನನಗೆ ಯಾರಿದ್ದಾರೆ? ನಿನ್ನನ್ನು ಅಗಲಿ ನಾನು ಇರುವೆನೆ? ನಿನ್ನ ಸಾವಿಗೆ ಕಾರಣನಾದವನನ್ನು ಕೊಂದು ನಾನು ನಿನ್ನ ಬೆನ್ನ ಹಿಂದೆಯೇ ಬರುತ್ತೇನೆ. ಇದೇ ನನ್ನ ಆದ್ಯ ಕರ್ತವ್ಯಲ್ಲವೆ? ಎಂದು ಕಣ್ಣೀರು ಹಾಕುತ್ತ ನಾವಿಬ್ಬರು ದೇಹವೆರಡು, ಪ್ರಾಣ ಒಂದೇ ಎನ್ನುವಂತೆ ಬದುಕಿದ್ದೆವು ಎನ್ನುವ ಲೋಕೋಕ್ತಿ ಈಗ ಸುಳ್ಳಾಗಿದೆ. ಯಾಕೆಂದರೆ, ನಿನ್ನನ್ನು ಕೊಂದ ಅರ್ಜುನನನ್ನು ಕೊಲ್ಲದೆ ನಾನಿನ್ನು ನಾಚಿಕೆಯಿಂದ ಬದುಕಿರುವೆ, ಹಾಗಾದರೆ ಇದು ನಾನು ನಿನಗೆ ತೋರಿಸುವ ನಿಜವಾದ ಪ್ರೀತಿ, ಸ್ನೇಹವೇ?. ನೀನು ತನ್ನ ಸಹೋದರನೆಂಬ ವಿಷಯ ಧರ್ಮರಾಜನಿಗೆ ಗೊತ್ತಿಲ್ಲ. ಆದರೆ ನನಗೆ ನೀನ್ಯಾರು ಎನ್ನುವದು ಗೊತ್ತಿದ್ದರೂ ಅದನ್ನು ನಿನಗೆ ತಿಳಿಸದೆ, ದೊರೆತನವನ್ನು ಕೊಡದೇ, ನನ್ನ ಕಾರ್ಯಸಾಧನೆಗಾಗಿ ನಿನ್ನನ್ನು ಪ್ರೀತಿಸುವಂತೆ ನಟಿಸಿ ನಿನ್ನನ್ನು ಕೊಲ್ಲಿಸಿದೆನು. ಕರ್ಣನು ತನಗೆ ರಾಜ್ಯ ಸಂಪತ್ತನ್ನು ಗಳಿಸಿಕೊಟ್ಟನು. ವೈರಿಗಳನ್ನು ತನ್ನ ಪ್ರತಾಪವೆಂಬ ಬೆಂಕಿಯಿಂದ ಸುಟ್ಟನು. ಆದರೆ, ನಾನು ಅವಕ್ಕೆ ಪ್ರತಿಯಾಗಿ ಅವನಿಗೆ ತರ್ಪಣವನ್ನು ಕೊಡಲಿಲ್ಲ. ಶವಸಂಸ್ಕಾರ(ಕರ್ಣನ ಶವಕ್ಕೆ ಬೆಂಕಿ ಇಟ್ಟು ಸುಡಲಿಲ್ಲ)ಮಾಡಲಿಲ್ಲ. ನನ್ನ ಹಾಗೇ ಮಿತ್ರದ್ರೋಹ ಮಾಡಿದವರು ಬೇರೆ ಯಾರಾದರುಂಟೆ? ಎಂದು ಪಶ್ಚಾತ್ತಾಪಟ್ಟುಕೊಳ್ಳುತ್ತ ಅಳಲನ್ನು ಹೊರಸೂಸಿದನು.

ಸ್ನೇಹಿತ ಕರ್ಣನನ್ನು ಕಳೆದುಕೊಂಡ ದುರ್ಯೋಧನನ ಪ್ರಲಾಪವನ್ನು ಆದಿಕವಿ ಪಂಪಗಿಂತ ಶಕ್ತಿಕವಿ ರನ್ನನು ತುಂಬಾ ಹೃದಯಸ್ಪರ್ಶಿಯಾಗಿ ಚಿತ್ರಿಸಿರುವಂತೆ ಕಂಡುಬರುತ್ತದೆ. ರನ್ನೂ ಗದಾಯುದ್ಧಕ್ಕೆ ಸಂಸ್ಕೃತದ ಮೇರು ಕವಿಗಳಾದ ಭಟ್ಟನಾರಾಯಣನ "ವೇಣಿಸಂಹಾರ" ಭಾಸನ "ಊರುಭಂಗ" ನಾಟಕಗಳು ಪ್ರೇರಕವಾಗಿರುವಂತೆ ಮಹಾಕವಿ ಪಂಪನ "ಪಂಪಭಾರತ"ವೂ ಪ್ರೇರಣೆಯನ್ನೊದಗಿಸಿದೆ. ಪಂಪಭಾರತದ ಹದಿಮೂರು ಹಾಗೂ ಹದಿನಾಲ್ಕನೆಯ ಆಶ್ವಾಸಗಳನ್ನು ರನ್ನ ಯಥಾವತ್ತಾಗಿ ಸ್ವೀಕರಿಸಿದ್ದಾನೇನೋ ಎನ್ನುವಷ್ಟರ ಮಟ್ಟಿಗೆ ಪ್ರಭಾವ ಬೀರಿದ್ದರೂ ರನ್ನ ಮಾತ್ರ ದುರ್ಯೋಧನನ ಪ್ರಲಾಪವನ್ನು ವಿಶಿಷ್ಟವಾಗಿ ನಿರೂಪಿಸಿರುವನು.

"ನೀನಿಲ್ಲದರಸುಗೆಯ್ವೆನೆ
ನೀನಿಲ್ಲದೆ ಬಾಳ್ವೆನೆಂದು ಬಗೆದಪ್ಪನೆ ಪೇಳ್
ನೀನಿಲ್ಲದಹಿತರೊಳ್ ಸಂ
ಧಾನ ಮಾಡುವೆನೆ ಕೂಡೆನಂಗಾಧಿಪತಿ"
"ಅನ್ಯತಂ ಲೋಭಂ ಭಯಮೆಂ
ಬಿನಿತುಂ ನೀನಿರ್ದನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗವಣ್ಮೆಂ
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್"
"ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್
ನೀನುಳ್ಳೊಡುಂಟು ಪೀಟಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ"

ಗದಾಯುದ್ಧದ ಈ ಪದ್ಯಗಳನ್ನು ಗಮನಿಸಿದಾಗ ವಿಮರ್ಶಕರು ಹೇಳಿ ಮಾತುಗಳು ಬಹುಸಮಂಜಸ ವೆನಿಸುತ್ತವೆ. ಅವೇನೆಂದರೆ, ಕನ್ನಡ ಕಾವ್ಯ ಪರಂಪರೆಯಲ್ಲಿ ಕರುಣರಸದ ಮೂರು ರಸಘಟ್ಟಿ ಸನ್ನಿವೇಶಗಳಿವೆ. ಅವೆಂದರೆ, ಒಂದು ರನ್ನ ಕವಿಯ "ಗದಾಯುದ್ಧ"ದ "ದುರ್ಯೋಧನನ ಪ್ರಲಾಪ", ಎರಡು ರಾಘವಾಂಕ ಕವಿಯ "ಹರಿಶ್ಚಂದ್ರ ಕಾವ್ಯ"ದ "ಚಂದ್ರಮತಿಯ ಪ್ರಲಾಪ", ಮೂರನೆಯದು ಷಡಕ್ಷರ ಕವಿಯ "ರಾಜಶೇಖರ ವಿಳಾಸ"ದ "ತಿರುಕೊ ವಿನಾಚಿಯ ಪ್ರಲಾಪ" ಈ ಮೂರೂ ಸಂದರ್ಭಗಳು ಕರುಣ ರಸಕ್ಕೆ ಹೇ ಮಾಡಿಸಿದ ದೃಷ್ಟಾಂತಗಳಂತಿವೆ.

ಪಂಪಭಾರತದ ಹದಿನಾಲ್ಕನೆಯ ಆಶ್ವಾಸದಲ್ಲಿ ಬರುವ ಜನಪ್ರಿಯ ಪದ್ಯವೂ ಸಹ ಕರ್ಣನ ವ್ಯಕ್ತಿತ್ವದ ಮೇಲೆ ಇನ್ನಷ್ಟು ಬೆಳಕನ್ನು ಚೆಲ್ಲುವುದಾಗಿದೆ.

"ಚಲದೊಳ್ ದುರ್ಯೋಧನಂ, ನನ್ನಿಯೊಳಿನ ತನಯಂ, ಗಂಡಿನೊಳ್ ಭೀಮಸೇನಂ,
ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ
ಬಲದೊಳ್ ಕುಂಭೋದ್ಭವಂ, ಸಾಹಸದ ಮಹಿಮೆಯೊಳ್ ಫಲ್ಗುಣಂ, ಧರ್ಮದೊಳ್
ನಿರ್ಮಲ ಚಿತ್ತಂ ಧರ್ಮಪುತ್ರಂ, ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ"

ಈ ಎಂಟು ಜನರಿಂದಲೇ ಮಹಾಭಾರತವು ವಿಶ್ವದಲ್ಲಿ ಪೂಜ್ಯನೀಯವಾದುದು ಎಂದು ಪಂಪ ಹೇಳುವಾಗ ನನ್ನಿ(ಸತ್ಯ)ಗೆ ಹೆಸರಾದ ಸೂರ್ಯಪುತ್ರ ಕರ್ಣನನ್ನು ಸೇರಿಸಿರುವುದನ್ನು ಇಲ್ಲಿ ಗ್ರಹಿಸಬಹುದು. ಒಟ್ಟಾರೆಯಾಗಿ ಪಂಪ ಮಹಾಕವಿಯು ಪಂಪ ಭಾರತದುದ್ದಕ್ಕೂ ಕಾವ್ಯದ ಪ್ರತಿನಾಯಕನಾದ ಕರ್ಣನ ಯಶೋಗೀತೆಯನ್ನು ಸುಶ್ರಾವ್ಯವಾಗಿ ಹಾಡಿದ್ದಾನೆ. ಬಿ. ಎಂ. ಶ್ರೀಕಂಠಯ್ಯನವರು ಗದಾಯುದ್ಧದಲ್ಲಿ ರನ್ನನು "ಭೀಮನನ್ನು ಇಳಿಸಿಲ್ಲ, ದುರ್ಯೋಧನನನ್ನು ಏರಿಸಿರುವನು, ಘನತೆಗೊಯ್ದಿರುವನು" ಎಂದು ಅಭಿಪ್ರಾಯಪಟ್ಟಿರುವಂತೆ, ಸಮಸ್ತ ಭಾರತ (ಪಂಪಭಾರತ) ದಲ್ಲಿ ಪಂಪನು "ಅರ್ಜುನನನ್ನು ಕಡೆಗಣಿಸಿಲ್ಲ, ಕರ್ಣನ ಯಶೋದುಂದುಬಿಯನ್ನು ಮೊಳಗಿಸಿರುವನು" ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದೇನೋ !

*****

ತೂಕದ ನೆಲೆ

"ತೂಕದನೆಲೆ" ಡಾ. ಶಿವಲಿಂಗಪ್ಪ ಭಂಡಾರಿ ಹಾಗೂ ಡಾ. ತಿಪ್ಪೇಸ್ವಾಮಿ. ಡಿ.ಎಸ್. ಅವರ ವಿಶಿಷ್ಟ ಹಾಗೂ ವಿಭಿನ್ನವಾದ ಸಂಪಾದನ ಕೃತಿಯಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಸಾಹಿತ್ಯ ವಲಯದಲ್ಲಿ ಹಿರಿಯ ಸಾಹಿತಿಗಳ ಬರಹವನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿ ಜೋಡಿಸಿ ಸಂಪಾದಿಸುವ ಹಾಗೂ ಅದನ್ನು ಕೃತಿರೂಪದಲ್ಲಿ ಹೊರತರುವ ಸುಲಭ ವಿಧಾನ ಸಧ್ಯ ಸಾಹಿತ್ಯ ವಲಯದಲ್ಲಿ ಚಾಲ್ತಿಯಲ್ಲಿದೆ. ಇದೆ ನೆಲೆಯ ಇನ್ನೊಂದು ಹೊಸವಿಧಾನವೆಂದರೆ. ಪ್ರಬುದ್ಧ ಬರಹಗಾರರಿಂದ ನಿರ್ದಿಷ್ಟ ವಿಷಯದ ಮೇಲೆ ಲೇಖನ ಬರೆಯಿಸಿ. ಲೇಖನಗಳನ್ನು ಒಂದಡೆ ಸಂಕಲನಗೊಳಿಸಿ ಕೃತಿರೂಪದಲ್ಲಿ ಹೊರತರುವ ಹೊಸ ಎರಡನೆಯ ವಿಧಾನ. ಈ ವಿಧಾನಕ್ಕೆ ಹೊಂದಿಕೊಂಡು ಕೃತಿ ಸಂಪಾದನ ಕಾರ್ಯಕ್ಕೆ ಕೈಹಾಕಿ ಯಶಸ್ವಿಯಾದವರೆ ಆತ್ಮಿಯ ಸ್ನೇಹಿತರಾದ ಡಾ. ಶಿವಲಿಂಗಪ್ಪ ಭಂಡಾರಿ ಹಾಗೂ ಡಾ. ತಿಪ್ಪೇಸ್ವಾಮಿ.ಡಿ.ಎಸ್.ಅವರು. ಪ್ರಸ್ತುತ ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಕಾಯಕವನ್ನು ನಿಷ್ಠೆಯಿಂದ ಮಾಡುತ್ತ ಇತ್ತ ಸಾಹಿತ್ಯ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು. ಏನಾದರೊಂದು ಹೊಸಹೊಳವಿನ ವಿಚಾರವನ್ನು ಹೊರಹಾಕಿ ಮುನ್ನಡೆಯುವ ಜಾಯಮಾನದವರು. ತೂಕದ ನೆಲೆಯ ಬರಹವನ್ನು ಸಂಪಾದಿಸಿ ನಾಡಿಗೆ ಪರಿಚಯಿಸ ಹೊರಟ ಅರ್ಥಪೂರ್ಣಕಾರ್ಯ ಮಾಡಿದವರು. ಉದಯೋನ್ಮುಖ ಬರಹಗಾರರಿಗೆ ಬರಹದ ನೆಲೆಸಿಗಲೆಂಬೆ ಹಂಬಲ ಇರ್ವ ಸಂಪಾದಕರಿಗೆ ಇದೆ. ಹಾಗೆ ಹಿರಿಯ ತಲೆಮಾರಿನ ಬರಹಗಾರರಿಗೂ ಸಮಾನ ಗೌರವ ನೀಡಿರುವದು ಕಂಡು ಬರುತ್ತದೆ. ಸಮನ್ವಯದ ಹಾದಿಯಲ್ಲಿ ನಡೆದು. ಸುವ್ಯವಸ್ಥಿತವಾಗಿ ೩೨ ಲೇಖನಗಳನ್ನು ಹೊಂದಿಸಿದ ಲೇಖನಗಳ ಸಂಗಮವೆ "ತೂಕದನೆಲೆ" ಹೆಸರಿನ ಗ್ರಂಥ. ಇದು ಬೆಂಗಳೂರಿನ ಎಸ್.ಎಲ್.ಎನ್.ಪಬ್ಲಿಕೇಷನ್‌ದಿಂದ ಬೆಳಕುಕಂಡಿದೆ. ೩೨೦ ಪುಟಗಳ ವಿಸ್ತಾರದಲ್ಲಿ ಅರಳಿದ ಸುಂದರ ಕಲಾಕುಸುಮ. ಇಂತಹ ಹಲವಾರು ಕೃತಿಗಳು ಇರ್ವ ಸ್ನೇಹಿತರಿಂದ ಮುಂದೆಯೂ ಹೊರಬರಲೆಂದು ಹಾರೈಸುತ್ತೇನೆ.

ಡಾ.ವ್ಹಿ.ಬಿ.ಸಣ್ಣಸಕ್ಕರಗೌಡರ
ಯುವ ಸಾಹಿತಿ, ಬಾದಾಮಿ

9788194812876

ರೂ. ೮೦/-